**ಸಿ.ಡಬ್ಲೂ-1 / ಪಿ.ಡಬ್ಲೂ-1**

**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು, ಮೈಸೂರು ಜಿಲ್ಲೆ .**

**ಸಿ.ಸಿ.ನಂ. 1197/2019**

| | | |
|---|---|---|
| ಸಾಕ್ಷಿದಾರರ ಹೆಸರು | : | ಸಿದ್ದಮ್ಮ |
| ಗಂಡನ ಹೆಸರು | : | ಸಿದ್ದನಾಯ್ಕ |
| ವಯಸ್ಸು | : | 75 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ಹುರಾ ಗ್ರಾಮ, ನಂಜನಗೂಡು ತಾ. |

**ಸಾಕ್ಷಿಯನ್ನು ದಿನಾಂಕಃ 19.03.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ಚಾಸಾ-2 ನನ್ನ ಗಂಡ. ಆರೋಪಿಗಳು ನೋಡಿ ಪರಿಚಯವಿರುತ್ತಾರೆ.

ಸುಮಾರು 3 ವರ್ಷಗಳ ಹಿಂದೆ ಹುರಾ ಗ್ರಾಮದಲ್ಲಿರುವ ನಮ್ಮ ಜಮೀನಿನಲ್ಲಿ ಸಂಜೆ 7.00 ಗಂಟೆ ಸಮಯದಲ್ಲಿ ನಾನು ಮತ್ತು ನನ್ನ ಗಂಡ ಕೆಲಸ ಮಾಡುತ್ತಿರುವಾಗ 1 ನೇ ಆರೋಪಿ ಬಂದು ಹೊಲ ನಿಮ್ಮಪ್ಪನದಾ ಎಂದು ಬಾಯಿಗೆ ಬಂದಂತೆ ಬೈದಿರುತ್ತಾರೆ. ಆಗ ನನ್ನ ಗಂಡ ಗ್ರಾಮಕ್ಕೆ ಜನರನ್ನು ಕರೆದುಕೊಂಡು ಬರಲು ಹೋದಾಗ 1 ನೇ ಆರೋಪಿ ನನಗೆ ಕಲ್ಲಿನಿಂದ ಹೊಡೆದಿರುತ್ತಾರೆ. 1 ನೇ ಆರೋಪಿ ನನ್ನ ಗಂಡನಿಗೂ ಕೂಡ ಹೊಡೆದಿರುತ್ತಾರೆ. ಆಗ ಮಲ್ಲುಂಡಿ ಗ್ರಾಮದ ಬಸವರವರು ಬಂದು ಗಲಾಟೆ ಬಿಡಿಸಿರುತ್ತಾರೆ. ನಂತರ ನಾನು ಠಾಣೆಗೆ ಹೋಗಿ ದೂರು ಬರೆಸಿರುತ್ತೇನೆ. ಈಗ ನನಗೆ ತೋರಿಸುತ್ತಿರುವ ದೂರಿನಲ್ಲಿ ನನ್ನ ಹೆಬ್ಬೆಟ್ಟು ಗುರುತು ಇರುತ್ತದೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ನಿಪಿ-1 ಎಂದು, ಅದರಲ್ಲಿರುವ ಸಾಕ್ಷಿಯ ಹೆಬ್ಬೆಟು ಗುರುತನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಾನು ದೂರು ಕೊಟ್ಟ ನಂತರ ಪೊಲೀಸರು ನಮ್ಮ ಜಮೀನಿನ ಹತ್ತಿರ ಬಂದು ಮಹಜರ್ ಮಾಡಿರುತ್ತಾರೆ. ಸ್ಥಳವನ್ನು ನಾನೇ ತೋರಿಸಿರುತ್ತೇನೆ. ಸಾಕ್ಷಿಯು ಮಹಜರ್ ನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ನಿಪಿ-2 ಎಂದು, ಅದರಲ್ಲಿರುವ ಸಾಕ್ಷಿಯ ಹೆಬ್ಬೆಟ್ಟು ಗುರುತನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಆ ಸಂದರ್ಭದಲ್ಲಿ ಬಸವ ಮತ್ತು ಮಂಜು ಎಂಬುವವರು ಇದ್ದರು. ಮಹಜರ್ ಸಮಯದಲ್ಲಿ ಏನನ್ನೂ ವಶಪಡಿಸಿಕೊಂಡಿರುವುದಿಲ್ಲ. ಭಾವಚಿತ್ರ ಮಾತ್ರ ತೆಗೆಸಿರುತ್ತಾರೆ. ಮಹಜರ್ ಸಮಯದಲ್ಲಿ ಪೊಲೀಸರು ನನ್ನ ಮರು ಹೇಳಿಕೆ ಪಡೆದಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸ.ಸ.ಅ ಕೋರಲಾಗಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸ.ಸ.ಅ ರವರಿಂದಃ</u>**

ದಿನಾಂಕ 25.04.2019 ರಂದು ಸಂಜೆ 7.00 ಗಂಟೆ ಸಮಯದಲ್ಲಿ ನಾನು ಮತ್ತು ನನ್ನ ಗಂಡ ಸರ್ವೆ ನಂಬರ್ 92/1 ರಲ್ಲಿ ಕೆಲಸ ಮಾಡುವಾಗ 1 ಮತ್ತು 2 ನೇ ಆರೋಪಿಗಳು ನಮ್ಮ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿರುತ್ತಾರೆ ಎಂದರೆ ಸರಿ. ಆಗ ಅವರು ನನ್ನ ಗಂಡನನ್ನು ಉದ್ದೇಶಿಸಿ, ಬೋಳಿಮಗನೆ, ಸೂಳೆಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. ಆಗ ನಾನು ಏಕೆ ಗಲಾಟೆ ಮಾಡುತ್ತೀರಾ ಎಂದು ಕೇಳಿದಾಗ 2 ನೇ ಆರೋಪಿ ನನಗೆ ಲೋಫರ್ ಮುಂಡೆ ಎಂದು ಬೈದಿರುತ್ತಾರೆ ಎಂದರೆ ಸರಿ. ಆಗ ನನ್ನ ಗಂಡ ಚಂದ್ರಶೇಖರ್ ರವರನ್ನು ಕರೆದುಕೊಂಡು ಬರುವುದಾಗಿ ಊರಿಗೆ ಹೋದರು ಎಂದರೆ ಸರಿ. ಆಗ 2 ನೇ ಆರೋಪಿ ಕೈಯಿಂದ ನನ್ನ ತಲೆಗೆ ಹೊಡೆದು ಈ ಜಮೀನನ್ನು ಬಿಟ್ಟು ಹೋಗು ಎಂದು ಹೇಳಿರುತ್ತಾರೆ ಎಂದರೆ ಸರಿ. ಆಗ 1 ನೇ ಆರೋಪಿ

ದೊಣ್ಣೆಯಿಂದ ನನ್ನ ಎಡಗೈನ ಮುಂಗೈಗೆ ಹೊಡೆದಿರುತ್ತಾರೆ ಎಂದರೆ ಸರಿ. ಆಗ 3 ನೇ ಆರೋಪಿ ಇವರಿಗೆ ಹೊಡೆಯಿರಿ ಎಂದು 1 ಮತ್ತು 2 ನೇ ಆರೋಪಿಗಳಿಗೆ ಕುಮ್ಮಕ್ಕು ನೀಡಿರುತ್ತಾರೆ ಎಂದರೆ ಸರಿ. ಆ ಸಂದರ್ಭದಲ್ಲಿ ನನ್ನ ಗಂಡ ಮತ್ತು ಚಾಸಾ-3 ರವರು ಗಲಾಟೆ ಬಿಡಿಸಿರುತ್ತಾರೆ ಎಂದರೆ ಸರಿ. ಆಗ ಆರೋಪಿಗಳು ನನಗು ಮತ್ತು ಚಾಸಾ-2 ರವರಿಗು ಕೊಲೆ ಮಾಡುವುದಾಗಿ ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಆಗ ಚಾಸಾ-6 ನನ್ನನ್ನು ನಂಜನಗೂಡು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ನಾನು ಆಸ್ಪತ್ರೆಯಲ್ಲಿರುವಾಗ ಪೊಲೀಸರು ನನ್ನ ಹೇಳಿಕೆ ದೂರು ಪಡೆದಿರುತ್ತಾರೆ ಎಂದರೆ ಸರಿ. ಮಹಜರ್ ಸಮಯದಲ್ಲಿ ಚಾಸಾ-4 ಮತ್ತು 5 ಇದ್ದರು ಎಂದರೆ ಸರಿ. ಮಹಜರ್ ಸಮಯದಲ್ಲಿ ಪೊಲೀಸರು ಒಂದು ದೊಣ್ಣೆಯನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸ್ವತ್ತನ್ನು ಹಾಜರುಪಡಿಸುವ ಸಲುವಾಗಿ ಮುಂದಿನ ಮುಖ್ಯವಿಚಾರಣೆಗಾಗಿ ಸಮಯ ಕೋರಿರುತ್ತಾರೆ, ಸಮಯ ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
**ನಂಜನಗೂಡು.**